# ಹಾವೇರಿ ವಿಶ್ವವಿದ್ಯಾಲಯ, ಹಾವೇರಿ
(ಕರ್ನಾಟಕ ಸರ್ಕಾರದ ರಾಜ್ಯ ಸಾರ್ವಜನಿಕ ವಿಶ್ವವಿದ್ಯಾಲಯ)
ಕೆರಿಮತ್ತಿಹಳ್ಳಿ, ಹಾವೇರಿ-581110
ಪರೀಕ್ಷಾ ವಿಭಾಗ

**HAVERI UNIVERSITY, HAVERI**
(A State Public University, Government of Karnataka) **KERIMATTIHALLI-HAVERI-581110.**

**Mobile:+91 9108494253**

**Email Id:** regehuhk@gmail.com, huhk.regeval@karnataka.gov.in

www.haveriuniversity.ac.in


**No:HUH/Exam/UG/EA/2025-26/ 147** **Date: 05.06.2026**

## ಅಧಿಸೂಚನೆ

ವಿಷಯ: ಜೂನ್/ಜುಲೈ-26ರಲ್ಲಿ ಜರಗುವ ಸ್ನಾತಕ ಪದವಿಯ NEP ಆರನೇ ಸೆಮಿಸ್ಟರ್‌ನ (Regular) ಪರೀಕ್ಷಾ ಅರ್ಜಿ ಹಾಗೂ ಶುಲ್ಕ ಭರಿಸುವ ಕುರಿತು.
ಉಲ್ಲೇಖ: ಮಾನ್ಯ ಕುಲಪತಿಗಳ ಆದೇಶ ದಿನಾಂಕ: 05.06.2026

ಎಲ್ಲ ಸ್ನಾತಕ ಪದವಿಯ NEP ಆರನೇ ಸೆಮಿಸ್ಟರ್‌ನ (Regular) ಪರೀಕ್ಷೆಗಳು ಜೂನ್/ಜುಲೈ-26ರಲ್ಲಿ ಜರಗುವವು. ಸದರಿ ಪರೀಕ್ಷೆಗಳ ವಿವರವಾದ ವೇಳಾ ಪಟ್ಟಿಯನ್ನು ಹಾವೇರಿ ವಿಶ್ವವಿದ್ಯಾಲಯದ ಅಂತರ್ಜಾಲದಲ್ಲಿ ಹಾಗೂ UUCMS ತಂತ್ರಾಂಶದಲ್ಲಿ ನಂತರ ಪ್ರಕಟಿಸಲಾಗುವುದು.

ಹಾವೇರಿ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲ ಮಹಾವಿದ್ಯಾಲಯಗಳ ಪ್ರಾಚಾರ್ಯರು ವಿದ್ಯಾರ್ಥಿಗಳಿಂದ UUCMS ತಂತ್ರಾಂಶದ ಮೂಲಕ ಅರ್ಜಿ ಮತ್ತು ಶುಲ್ಕಗಳನ್ನು ಭರಿಸುವಾಗ ಈ ಕೆಳಗಿನ ವಿವರವಾದ ಸೂಚನೆಗಳನ್ನು ಹಾಗೂ ಕೊನೆಯ ದಿನಾಂಕವನ್ನು ತಪ್ಪದೇ ಗಮನಿಸಬೇಕು. ಪರೀಕ್ಷಾ ಅರ್ಜಿಗಳನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸುವಾಗ ಕವರಿಂಗ್ ಪತ್ರದ ಜೊತೆಗೆ 1) ಯು.ಯು.ಸಿ.ಎಂ.ಎಸ್ ತಂತ್ರಾಂಶದಲ್ಲಿನ ಸ್ಟೇಟ್‌ಮೆಂಟ್ 2) ಅನುಬಂಧ-A ಹಾಗೂ ಅನುಬಂಧ-B ನಮೂನೆಗಳನ್ನು ಭರ್ತಿಮಾಡಿ **ದ್ವಿ ಪ್ರತಿಯಲ್ಲಿ ಪರೀಕ್ಷಾ ವಿಭಾಗಕ್ಕೆ ಒಂದು ಪ್ರತಿ ಹಾಗೂ ಹಣಕಾಸು ವಿಭಾಗಕ್ಕೆ ಒಂದು ಪ್ರತಿಯನ್ನು ದಿನಾಂಕ: 24.06.2026ರ ಒಳಗಾಗಿ ಸಲ್ಲಿಸಬೇಕು.**

1) ದಿನಾಂಕ: **08.06.2026** ರಿಂದ ವಿದ್ಯಾರ್ಥಿಗಳು ಪರೀಕ್ಷಾ ಅರ್ಜಿಯನ್ನು UUCMS ತತ್ರಾಂಶದ ಮೂಲಕ ಪರೀಕ್ಷಾ ಶುಲ್ಕವನ್ನು ಭರಿಸಿ ದಂಡವಿಲ್ಲದೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **17.06.2026**
2) ವಿದ್ಯಾರ್ಥಿಗಳು ರೂ. **250/-** ಮೊದಲನೇಯ ದಂಡದೊಂದಿಗೆ ಪರೀಕ್ಷಾ ಅರ್ಜಿಯನ್ನು UUCMS ತತ್ರಾಂಶದ ಮೂಲಕ ಪರೀಕ್ಷಾ ಶುಲ್ಕ ಭರಿಸಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **19.06.2026.**
3) ವಿದ್ಯಾರ್ಥಿಗಳು ರೂ. **550/-** (1st Penalty 250 + 2nd Penalty 300 Total= 550) ಎರಡನೇಯ ದಂಡದೊಂದಿಗೆ ಪರೀಕ್ಷಾ ಅರ್ಜಿಯನ್ನು UUCMS ತತ್ರಾಂಶದ ಮೂಲಕ ಪರೀಕ್ಷಾ ಶುಲ್ಕ ಭರಿಸಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **21.06.2026.**
4) ಎರಡನೇ ದಂಡದ ನಂತರವೂ ವಿದ್ಯಾರ್ಥಿಗಳು ಪರೀಕ್ಷಾ ಅರ್ಜಿಯನ್ನು ಭರ್ತಿ ಮಾಡುವುದಾದರೆ ಒಂದು ದಿನಕ್ಕೆ ರೂ. **300/-** ರಂತೆ ಅಥವಾ ರೂ. **2,500/-** ನ್ನು ವಿಶೇಷ ದಂಡವೆಂದು ವಿಶ್ವವಿದ್ಯಾಲಯಕ್ಕೆ ಭರಿಸಬೇಕು.

## ವಿಶೇಷ ಸೂಚನೆ

1) ಹಾವೇರಿ ವಿಶ್ವವಿದ್ಯಾಲಯದ ವ್ಯಾಪ್ತಿಯ ಎಲ್ಲ ಮಹಾವಿದ್ಯಾಲಯಗಳು ಪ್ರತಿ ಶೈಕ್ಷಣಿಕ ವರ್ಷಕ್ಕೆ ಸಂಯೋಜನೆಯನ್ನು ಪಡೆಯುವುದು ಖಡ್ಡಾಯವಾಗಿರುತ್ತದೆ. ಕೆಲವೊಂದು ಮಹಾ ವಿದ್ಯಾಲಯಗಳಿಂದ ಸಂಯೋಜನೆಯ ಅಧಿಸೂಚನೆಯನ್ನು ಪಡೆಯದೇ ವಿದ್ಯಾರ್ಥಿಗಳ ಪ್ರವೇಶ ಯಾದಿಯನ್ನು ಹಾಗೂ ವಿದ್ಯಾರ್ಥಿಗಳ ಪರೀಕ್ಷಾ ಅರ್ಜಿಯನ್ನು ಪರೀಕ್ಷಾ ವಿಭಾಗಕ್ಕೆ ಸಲ್ಲಿಸುವುದನ್ನು ಪರಿಗಣಿಸಲಾಗುವುದಿಲ್ಲ. ಸಂಯೋಜನೆಯ ಅಧಿಸೂಚನೆಯನ್ನು ಪಡೆಯದೆ ಇದ್ದಲ್ಲಿ ಮಹಾವಿದ್ಯಾಲಯಗಳಲ್ಲಿ ವ್ಯಾಸಂಗ ಕ್ರಮಗಳನ್ನು ಮುಂದುವರೆಸುವುದಕ್ಕೆ / ವಿಸ್ತರಿಸುವುದಕ್ಕೆ ಮಾನ್ಯತೆ ಇರುವುದಿಲ್ಲ ಹಾಗೂ ಅಂತಹ ಮಹಾವಿದ್ಯಾಲಯಗಳ ವಿದ್ಯಾರ್ಥಿಗಳು ಪರೀಕ್ಷೆಗೆ ಅರ್ಜಿ ತುಂಬಲು ಸಹ ಅರ್ಹರಿರುವುದಿಲ್ಲ. ಆದ್ದರಿಂದ ಪರೀಕ್ಷಾ ಅರ್ಜಿಗಳನ್ನು ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗಕ್ಕೆ ಸಲ್ಲಿಸುವಾಗ ಸಿಡಿಸಿ/ಸಂಯೋಜನೆ ವಿಭಾಗದಿಂದ ಪಡೆದ ಪ್ರಸಕ್ತ ವರ್ಷದ ಅಧಿಸೂಚನೆಯನ್ನು ಕಡ್ಡಾಯವಾಗಿ ಲಗತ್ತಿಸುವುದು.

**ಸೂಚನೆಗಳು:**

1. UUCMS ಅಂತರ್ಜಾಲದ ಮೂಲಕ ವಿದ್ಯಾರ್ಥಿಗಳು ಸಲ್ಲಿಸಿದ ಪರೀಕ್ಷಾ ಅರ್ಜಿಗಳನ್ನು ಸಂಬಂಧಪಟ್ಟ ಮಹಾವಿದ್ಯಾಲಯಗಳ ಪಾಚಾರ್ಯರು ಈ ಮುಂದಿನ ಷರತ್ತುಗಳಿಗೆ ಒಳಪಟ್ಟು ಸಹಿ ಮಾಡಬೇಕು. ಪ್ರತಿ ಸೆಮಿಸ್ಟರ್ ಪ್ರತಿ ವಿಷಯದಲ್ಲೂ ಕನಿಷ್ಠ 75% ಹಾಜರಾತಿಯನ್ನು ಪೂರೈಸದ ವಿದ್ಯಾರ್ಥಿಗಳಿಗೆ ಪರೀಕ್ಷಾ ಅರ್ಜಿ ನಮೂನೆಗಳನ್ನು ರದ್ದಪಡಿಸುವ ಷರುತ್ತುಗಳಿಗೆ ಒಳಪಟ್ಟುರುತ್ತದೆ. ಮಹಾವಿದ್ಯಾಲಯಗಳ ಪ್ರಾಚಾರ್ಯರು ಕೋರಿಕೆಯ ಮೇರೆಗೆ ಅಂತಹ ವಿದ್ಯಾರ್ಥಿಗಳ ಪರೀಕ್ಷೆಯ ಪ್ರವೇಶ ಪತ್ರಗಳನ್ನು (ಹಾಲ್ ಟಿಕೆಟ್) / ಫ್ರಿಜ್/ ತಡೆಹಿಡಿಯಲಾಗುತ್ತದೆ. ಅಂತಹ ವಿದ್ಯಾರ್ಥಿಗಳಿಗೆ ಅಂತರ್ಜಾಲದಲ್ಲಿ ಭರ್ತಿ ಮಾಡಿದ ಪರೀಕ್ಷಾ ಅರ್ಜಿಯ ಆಧಾರದ ಮೇಲೆ ಪರೀಕ್ಷೆ ಬರೆಯಲು ಅವಕಾಶ ನೀಡುವುದಿಲ್ಲ. ಯು.ಜಿ.ಸಿ ನಿಯಮಗಳ ಪ್ರಕಾರ ವಿದ್ಯಾರ್ಥಿಗಳು ಕಡ್ಡಾಯವಾಗಿ 75% ರಷ್ಟು ಹಾಜರಾತಿಯನ್ನು ಪೂರೈಸಿರಬೇಕು.
2. ಪರೀಕ್ಷಾ ಶುಲ್ಕದ ಜೊತೆಗೆ ಪ್ರತಿ ವಿದ್ಯಾರ್ಥಿಯು ರೂ.200 - ಈ ಅಂತರ್ಜಾಲ ಪರೀಕ್ಷಾ ಅರ್ಜಿ ನಮೂನೆಯ ಪ್ರಕ್ರಿಯ ಶುಲ್ಕವನ್ನು (ಪ್ರತಿ ಸೆಮಿಸ್ಟರ್‌ಗೆ) ಹಾಗೂ ರೂ. 195/-ನ್ನು ಅಂಕಪಟ್ಟಿ ಶುಲ್ಕವೆಂದು ಭರಿಸುವುದು.
3. ಕರ್ನಾಟಕ ಸರ್ಕಾರವು SSP ಮೂಲಕ SC/ST/Cat-I/IIA/IIB/IIIA/III-B ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ಅರ್ಹ ವಿದ್ಯಾರ್ಥಿಗಳ ಖಾತೆಗೆ ನೇರವಾಗಿ ವರ್ಗಾಯಿಸುವುದರಿಂದ ಅಂತಹ ವಿದ್ಯಾರ್ಥಿಗಳು ಪೂರ್ಣ ಪರೀಕ್ಷಾ ಶುಲ್ಕವನ್ನು ಭರಿಸುವುದು.
4. ವಿಶ್ವವಿದ್ಯಾಲಯವು ನಿಗದಿಪಡಿಸಿದ ಕೊನೆಯ ದಿನಾಂಕದ ನಂತರ ಬರುವ ಯಾವುದೇ ಪರೀಕ್ಷಾ ಅರ್ಜಿಗಳನ್ನು ತೆಗೆದುಕೊಳ್ಳುವುದಿಲ್ಲ/ಪರಿಗಣಿಸವುದಿಲ್ಲ. ಅಲ್ಲದೇ UUCMS ಅಂತರ್ಜಾಲದ ಮೂಲಕ ಭರಿಸಿದ ಪರೀಕ್ಷಾ ಅರ್ಜಿ ನಮೂನೆಗಳನ್ನು ವಿದ್ಯಾರ್ಥಿಗಳು ಭರ್ತಿ ಮಾಡಲು ನೇರವಾಗಿ ಪರೀಕ್ಷಾ ವಿಭಾಗವನ್ನು ಸಂಪರ್ಕಿಸದಿರಲು ವಿದ್ಯಾರ್ಥಿಗಳಿಗೆ ತಿಳಿಸಲು ಎಲ್ಲ ಮಹಾವಿದ್ಯಾಲಯಗಳ ಪ್ರಾಚಾರ್ಯರಿಗೆ ಸೂಚಿಸಲಾಗಿದೆ.
5. UUCMS ಅಂತರ್ಜಾಲದ ಪರೀಕ್ಷಾ ಅರ್ಜಿ ನಮೂನೆಗಳನ್ನು ತುಂಬಿಸುವಾಗ ತಿದ್ದುಪಡಿಯನ್ನು ತಪ್ಪಿಸಲು ಮಹಾವಿದ್ಯಾಲಯದ ಸಿಬ್ಬಂದಿಗಳು ವಿದ್ಯಾರ್ಥಿಗಳಿಗೆ ನಿರ್ದೇಶನ ನೀಡುವುದು ಯಾವುದೇ ತಿದ್ದುಪಡಿಗಳು / ತಪ್ಪುಗಳು ಉಂಟಾದರೆ ಮಹಾವಿದ್ಯಾಲಯಗಳೇ ಜವಾಬ್ದಾರರಾಗಿರುತ್ತಾರೆ. Under Section 74 & 75 of K.S.U. Act 2000 ನಿಯಮಾವಳಿ/ಆರ್ಡಿನೆನ್ಸ್ ಪ್ರಕಾರ ಪ್ರಾಚಾರ್ಯರು ದಂಡಕ್ಕೆ ಬಾಧ್ಯಸ್ಥರಾಗುತ್ತಾರೆ.
6. ಪರೀಕ್ಷೆಗೆ ಸಂಬಂಧಿಸಿದಂತೆ ಶುಲ್ಕಗಳನ್ನು ವಿಶ್ವವಿದ್ಯಾಲಯಕ್ಕೆ ಭರಣ ಮಾಡಿದ ನಂತರ ಯಾವುದೇ ಕಾರಣಕ್ಕೂ ಮರಳಿ ಕೊಡುವದಿಲ್ಲ.
7. ಪರಿಷ್ಕೃತ ರಾಷ್ಟ್ರೀಯ ಶಿಕ್ಷಣ ನೀತಿ-2020 (ಎನ್.ಇ.ಪಿ) ಹಾಗೂ ರಾಷ್ಟ್ರೀಯ ಶಿಕ್ಷಣ ನೀತಿ-2020 (ಆರ್.ಎನ್.ಇ.ಪಿ) ಅಡಿಯಲ್ಲಿ ನೊಂದಣಿ ಮಾಡಿದ (Regular/Repeater) ವಿದ್ಯಾರ್ಥಿಗಳ ಅಂಕಿ ಅಂಶಗಳನ್ನು ಪದವಿ/ಸೆಮಿಸ್ಟರ್‌ವಾರು ಈ ಅಧಿಸೂಚನೆಯೊಂದಿಗೆ ಲಗತ್ತಿಸಿದ (Annexure-'A') ಪ್ರತ್ಯೇಕವಾಗಿ ಸಿದ್ಧಪಡಿಸಿ ಹಾರ್ಡ್ ಕಾಫಿ ಮತ್ತು ಸಾಫ್ಟ್ ಕಾಫಿಯನ್ನು ಪರೀಕ್ಷಾ ವಿಭಾಗಕ್ಕೆ ಸಲ್ಲಿಸುವುದು.
8. ಪರೀಕ್ಷಾ ಅರ್ಜಿ ಶುಲ್ಕವನ್ನು Debit Card / Credit Card / Bank Applicationಗಳ ಮೂಲಕ ಮಾತ್ರ ಪಾವತಿಸಬೇಕು. ಒಂದು ವೇಳೆ Third Party Application (Phone Pay/Google Pay)ಗಳ ಮೂಲಕ ಪಾವತಿಸಿ ಅದು ಯಶಸ್ವಿಯಾಗದಿದ್ದರೆ ವಿಶ್ವವಿದ್ಯಾಲಯದವರು ಜವಾಬ್ದಾರರಲ್ಲ.

**ಪರೀಕ್ಷಾ ಶುಲ್ಕದ ವಿವರ ಈ ಕೆಳಗಿನಂತಿದೆ.**

| **ಕ್ರ. ಸಂ** | **NEP ಆರನೇ ಸೆಮಿಸ್ಟರ್‌ನ (Regular) ಶುಲ್ಕದ ವಿವರ** | **ಶುಲ್ಕ** |
|---|---|---|
| 1 | ಅಂತರ್ಜಾಲ ಪರೀಕ್ಷಾ ಅರ್ಜಿ ಪ್ರಕ್ರಿಯೆ ಶುಲ್ಕ | 200/- |
| 2 | ಅಂಕಪಟ್ಟಿ ಶುಲ್ಕ | 195/- |
| 3 | ಉತ್ತೀರ್ಣ ಪ್ರಮಾಣ ಪತ್ರದ ಶುಲ್ಕ | 195/- |
| 4 | ಪ್ರೊಜೇಕ್ಟ್/ಫಿಲ್ಡ್ ವರ್ಕ ರಿಪೋರ್ಟ ಮೌಲ್ಯಮಾಪನ/ ವೈವಾ (ಸಂಬಂಧಪಟ್ಟ ಕೋರ್ಸಗಳಿಗೆ) | 550/- |
| 5 | ಲಿಖಿತ ಪರೀಕ್ಷಾ ಶುಲ್ಕ: ಬಿ.ಎ/ ಬಿ.ಎಸ್ಸಿ/ ಬಿ.ಕಾಂ | 1095/- |
| 6 | ಲಿಖಿತ ಪರೀಕ್ಷಾ ಶುಲ್ಕ: ಬಿ.ಬಿ.ಎ/ ಬಿ.ಸಿ.ಎ | 1295/- |

ಮೇಲಿನ ಅಧಿಸೂಚನೆಯನ್ನು ಎಲ್ಲ ವಿದ್ಯಾರ್ಥಿಗಳ ಗಮನಕ್ಕೆ ತಂದು ಅದರಂತೆ ಪರೀಕ್ಷಾ ಫಾರ್ಮ್ / ಶುಲ್ಕಗಳನ್ನು ತುಂಬಿಸಿಕೊಳ್ಳುವುದು.

**ವಿಶೇಷ ಸೂಚನೆ**:

1) ಉತ್ತೀರ್ಣ ಪ್ರಮಾಣ ಪತ್ರದ ಶುಲ್ಕ 195/- ಪ್ರೊಜೇಕ್ಟ್/ಫಿಲ್ಡ್ ವರ್ಕ ರಿಪೋರ್ಟ ಮೌಲ್ಯಮಾಪನ/ ವೈವಾ ಶುಲ್ಕ 550/-ಗಳನ್ನು ಪ್ರಾಚಾರ್ಯರು ವಿದ್ಯಾರ್ಥಿಗಳಿಂದ ಕಲೇಕ್ಟ್ ಮಾಡಿ ನಂತರ ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗದ ಖಾತೆ (Account No: 41896598004 IFSC Code: SBIN0040127)ಗೆ ಭರಿಸುವುದು.
2) ಪರೀಕ್ಷಾ ಅರ್ಜಿ ಶುಲ್ಕ ಭರಿಸಲು ಕೊನೆಯ ದಿನಾಂಕ ಮುಗಿದ ನಂತರ ಯಾವುದೇ ಕಾರಣಕ್ಕೂ ದಿನಾಂಕವನ್ನು ವಿಸ್ತರಿಸಲಾಗುವುದಿಲ್ಲ ಹಾಗೂ ಆಫ್‌ಲೈನ್ ಮುಖಾಂತರ ಪರೀಕ್ಷಾ ಅರ್ಜಿ ಶುಲ್ಕವನ್ನು ಭರಿಸಲು ವಿದ್ಯಾರ್ಥಿಗಳನ್ನು ವಿಶ್ವವಿದ್ಯಾಲಯಕ್ಕೆ ಪ್ರಾಚಾರ್ಯರು ಕಳುಹಿಸಬಾರದು.

Registrar (Evaluation)
Registrar (Evaluation)
Haveri University
Kerimattihalli, Haveri-581110

**ಪ್ರತಿ:**
ಪ್ರಾಚಾರ್ಯರು, ಹಾವೇರಿ ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ ಎಲ್ಲ ಸ್ನಾತಕ ಮಹಾವಿದ್ಯಾಲಯಗಳು.

**ಪ್ರತಿ ಮಾಹಿತಿಗಾಗಿ**

1) ಕುಲಪತಿಗಳು, ಹಾವೇರಿ ವಿಶ್ವವಿದ್ಯಾಲಯ, ಹಾವೇರಿ.
2) ಕುಲಸಚಿವರು, ಹಾವೇರಿ ವಿಶ್ವವಿದ್ಯಾಲಯ, ಹಾವೇರಿ.
3) ವಿತ್ತಾಧಿಕಾರಿಗಳು, ಹಾವೇರಿ ವಿಶ್ವವಿದ್ಯಾಲಯ, ಹಾವೇರಿ.
4) ನಿರ್ದೇಶಕರು, ಸಿ.ಡಿ.ಸಿ ವಿಭಾಗ, ಹಾವೇರಿ ವಿಶ್ವವಿದ್ಯಾಲಯ, ಹಾವೇರಿ.
5) ಕೋ-ಆರ್ಡಿನೇಟರ್, ಯು.ಯು.ಸಿ.ಎಂ.ಎಸ್ ಘಟಕ, ಹಾವೇರಿ ವಿಶ್ವವಿದ್ಯಾಲಯ, ಹಾವೇರಿ.

<u>ಅನುಬಂಧ-1</u>

## ಸನ್ 2025-26ನೇ ಸಾಲಿನ ಸ್ನಾತಕ ಪದವಿ ಆರನೇ ಸೆಮಿಸ್ಟರ್‌ನ (Regular) ಪರೀಕ್ಷಾ ಅರ್ಜಿ/ಶುಲ್ಕವನ್ನು <u>ಯು.ಯು.ಸಿ.ಎಂ.ಎಸ್ ತಂತ್ರಾಂಶದಲ್ಲಿ (ಆನ್‌ಲೈನ್ ಮೂಲಕ)</u> ಭರಿಸಿದ ವಿದ್ಯಾರ್ಥಿಗಳ ವಿವರ

| Sl. No | Scheme | Sem | Course | Total No. of Students | Total Amount | Penalty | Grand Total |
|---|---|---|---|---|---|---|---|
| 1 | NEP (Regular) | 6th | BA | | | | |
| | | | B.Com | | | | |
| | | | B.Sc | | | | |
| | | | BCA | | | | |
| | | | | | | **Total** | |

Seal & Signature of the Principal

(Annexure–'2')

## :NEP Students Strength:
**(Regular/Repeaters)**

**Name of the College:**
**UUCMS College Code:**
**Degree & Semester:**

| SI. No | College Name/ College code as per UUCMS | Subject Name | UCMS Subject Code | Total No. of Students appearing for the Exam |
|---|---|---|---|---|
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |

Seal & Signature of the Principal
Name:
Mobile No:

**ಸೂಚನೆ**: ನೊಂದಣಿ ಮಾಡಿದ ವಿಯಮಿತ ವಿದ್ಯಾರ್ಥಿಗಳ ಅಂಕಿ-ಅಂಶಗಳನ್ನು ಒಟ್ಟುಗೂಡಿಸಿ ವಿಷಯವಾರು ಈ ಮೇಲಿನ ನಮೂನೆ (Annexure 'A') ಯಲ್ಲಿ ಪ್ರತ್ಯೇಕವಾಗಿ ಪದವಿವಾರು/ಸೆಮಿಸ್ಟರ್‌ವಾರು ತಯಾರು ಮಾಡಿ ಹಾರ್ಡ ಕಾಫಿ & ಸಾಫ್ಟ್ ಕಾಪಿಯನ್ನು ಪರೀಕ್ಷಾ ವಿಭಾಗಕ್ಕೆ ಒಂದು ಪ್ರತಿ ಹಾಗೂ ಹಣಕಾಸು ವಿಭಾಗಕ್ಕೆ ಒಂದು ಪ್ರತಿಯನ್ನು ಕೋರ್ಸವಾರು ವಿಷಯಗಳ ಪ್ರತ್ಯೇಕವಾಗಿ ಯಾದಿಯನು ಸಲ್ಲಿಸುವುದು.

ಪರೀಕ್ಷಾ ವಿಭಾಗದ ಮೇಲ್ ವಿಳಾಸ
regehuhk@gmali.com